ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/58/2015-16. ದಿನಾಂಕ:19-07-2016.

| ವಾದಿಗಳು | ಪ್ರತಿವಾದಿಗಳು |
|---|---|
| ನೇವಾರ ಯಲ್ಲಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ<br>ಬೆನಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ದೊಡ್ಡನೇವಾರ ತಿಮ್ಮಣ್ಣ ತಂದೆ ದೊಡ್ಡ ನೇವಾರ<br>ಸಣ್ಣ ಹನುಮಂತಪ್ಪ<br>ಬೆನಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1337ಎ. 1338ಎ. ವಿಸ್ತೀರ್ಣ 1-71. 0-80. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1337ಎ. 1338ಎ. ವಿಸ್ತೀರ್ಣ 1-71. 0-80. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಬೆನಕನಹಳ್ಳಿ ಗ್ರಾಮದ ನೇವಾರ ಯಲ್ಲಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಉಜ್ಜನಿ ಇವರು ನಮೂನೆ-21 ನೋಟಿಸನ್ನು ದಿನಾಂಕ 06-04-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ದಿನಾಂಕ 04-06-1996 ರಂದು ದೊಡ್ಡನೇವಾರ ತಿಮ್ಮಣ್ಣ ತಂದೆ ದೊಡ್ಡನೇವಾರ ಸಣ್ಣ ಹನುಮಂತಪ್ಪ ಇವರಿಗೆ ವಿಲ್ ನಾಮೆಯಾನೆ ಮರಣ ಶಾಸನ ಪತ್ರ ನೊಂದಣಿಯಾಗಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 105/2014-15. ದಿನಾಂಕ 29-04-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 20-10-2015 ರಿಂದ 19-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಉಜ್ಜನಿ ಗ್ರಾಮದ ಸನಂ 1337ಎ. 1338ಎ. ವಿಸ್ತೀರ್ಣ 1-71. 0-80. ಎಕ್ರೆ ಜಮೀನುಗಳು ಅರ್ಜಿದಾರರ ತಂದೆಯಾದ ನೇವಾರ ದೊಡ್ಡಹನುಮಂತಪ್ಪ ತಂದೆ ತಿಮ್ಮಣ್ಣ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 17-01-2007 ರಂದು ಹಾಗೂ ಇವರ ಹೆಂಡತಿ ಅಂಜಿನಮ್ಮ ಇವರು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಸನಂ 1337ಎಪ್ಯೆಕಿ. 1338ಎಪ್ಯೆಕಿ. ವಿಸ್ತೀರ್ಣ 1-21. 1-30. ಎಕ್ರೆ ಜಮೀನುಗಳನ್ನು ಅರ್ಜಿದಾರರ ತಂದೆಯವರಾದ ನೇವಾರ ದೊಡ್ಡ ಹನುಮಂತಪ್ಪ ತಂದೆ ತಿಮ್ಮಪ್ಪ ಇವರು ಪ್ರತಿವಾದಿಯಾದ ದೊಡ್ಡನೇವಾರ ತಿಮ್ಮಣ್ಣ ತಂದೆ ಸಣ್ಣ ಹನುಮಂತಪ್ಪ ಇವರ ಹೆಸರಲ್ಲಿ ದಿನಾಂಕ 04-06-1994 ರಂದು ಡಾಕ್ಯುಮೆಂಟ್ ನಂಬರ್: 04/1994-95 ರ ಪ್ರಕಾರ ವಿಲ್ಲುನಾಮೆಯಾನೆ ಮರಣ ಶಾಸನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಸದರಿ ನೇವಾರ ದೊಡ್ಡಹನುಮಂತಪ್ಪ ಇವರು ದಿನಾಂಕ 17-01-2007 ರಂದು ನಿಧನ ಹೊಂದಿರುತ್ತಾರೆ. ಆ ದಿನದಿಂದ

ಇಲ್ಲಿಯವರೆಗೂ ಪ್ರತಿವಾದಿಯಾದ ತಿಮ್ಮಪ್ಪ ಇವರುಗಳ ಸದರಿ ಜಮೀನುಗಳಲ್ಲಿ ಸ್ವಾದೀನ ಅನುಭವವನ್ನು ಹೊಂದಿರುತ್ತಾರೆ.

ಅರ್ಜಿದಾರರು ಸದರಿ ಜಮೀನುಗಳನ್ನು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುವುದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ತಮ್ಮ ಹೆಸರಿಗೆ ಪಹಣಿ ಮಾಡಲು ಕೊಟ್ಟಿರುತ್ತಾರೆ. ಸದರಿ ವಿವಾದಿತ ಜಮೀನುಗಳಲ್ಲಿ ಅರ್ಜಿದಾರರಿಗೆ ಮರಣ ಶಾಸನ ಪತ್ರ ಉಪನೊಂದಣಾಧಿಕಾರಿಗಳ ಕಛೇರಿ ಕೂಡ್ಲಿಗಿಯಲ್ಲಿ ನೊಂದಣಿಯಾಗಿರುವುದು ಗೊತ್ತಿದ್ದರೂ ಸಹಾ ಮತ್ತು ಸದರಿ ಆಸ್ತೀಯಲ್ಲಿ ಅರ್ಜಿದಾರರಿಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹಾ ಅರ್ಜಿಯನ್ನು ದಾಖಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನು ಅಡಿಯಲ್ಲಿ ಉರ್ಜಿತವಾಗತಕ್ಕದ್ದಲ್ಲ ಹಾಗೂ ತಕರಾರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ನೊಂದಾಯಿತ ವಿಲ್ಲುನಂತೆ ಹಕ್ಕು ಬದಲಾವಣೆ ಮಾಡುವುದರ ಜೊತೆಗೆ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನುಗಳು ದಿನಾಂಕ 07-06-1994 ರ ಡಾಕ್ಯುಮೆಂಟ್ ನಂಬರ್: 04/1994-95 ರ ಪ್ರಕಾರ ಪ್ರತಿವಾದಿಗಳ ಹೆಸರಲ್ಲಿ ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರ ನೊಂದಣಿಯಾಗಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1337ಎ. 1338ಎ. ವಿಸ್ತೀರ್ಣ 1-71. 0-80. ಎಕ್ರೆ ಜಮೀನುಗಳು ದಿನಾಂಕ 07-06-1994 ರ ಡಾಕ್ಯುಮೆಂಟ್ ನಂಬರ್: 04/1994-95 ರ ಪ್ರಕಾರ ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರದಲ್ಲಿ ಸದರಿ ಪ್ರತಿವಾದಿಯ ಹೆಸರಲ್ಲಿ ನೊಂದಣಿಯಾಗಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ನೇವಾರ ಯಲ್ಲಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ ಬೆನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎನ್.ಪರಮೇಶ್ವರಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ದೊಡ್ಡನೇವಾರ ತಿಮ್ಮಣ್ಣ ತಂದೆ ಸಣ್ಣ ಹನುಮಂತಪ್ಪ ಬೆನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ರಮೇಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

27-8-16